**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ , ಬೆಂಗಳೂರು-560001**

**ಸಂಖ್ಯೆ : ಇ-ಆಡಳಿತ ಬೋಸೇಮಾ 01/2019-20 ದಿನಾಂಕ : 06-11-2019**

**ಸುತ್ತೋಲೆ**

ವಿಷಯ: **Non teaching staff data software** ನಲ್ಲಿ ಅಳವಡಿಸಿರುವ ಇಲಾಖೆಯ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯನ್ನು ಸೇವಾ ಪುಸ್ತಕದೊಂದಿಗೆ ಪರಿಶೀಲಿಸಿಕೊಂಡು ಇಂದೀಕರಿಸುವ (**update**) ಬಗ್ಗೆ.

ಉಲ್ಲೇಖ: ಈ ಕಛೇರಿಯ ಜ್ಞಾಪನ ಸಂಖ್ಯೆ: ಇ-ಆಡಳಿತ ಬೋಸೇಮಾ 01/2017-18 ದಿನಾಂಕ: 05/11/2018

************

ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯನ್ನು ನಿರ್ವಹಣೆ ಮಾಡುವ ಸಲುವಾಗಿ Non teaching staff data software ತಂತ್ರಾಂಶದಲ್ಲಿ ಈಗಾಗಲೇ ಆಯಾ ಜಿಲ್ಲಾ ಲಾಗಿನ್‌ನಲ್ಲಿ ಮಾಹಿತಿಯನ್ನು ಅಳವಡಿಸಲಾಗಿದೆ. ತಂತ್ರಾಂಶದಲ್ಲಿ ಅಳವಡಿಸಿದ ಮಾಹಿತಿಯನ್ನು ಇಂದೀಕರಿಸಲು (update) ಹಾಗೂ ಇನ್ನು ಹೆಚ್ಚಿನ ಮಾಹಿತಿಯನ್ನು ಅಳವಡಿಸಲು ಅವಕಾಶ ನೀಡಲಾಗಿದೆ ಮತ್ತು ಈವರೆಗೂ ಸೇವಾ ಮಾಹಿತಿಯನ್ನು ಅಳವಡಿಸದೇ ಇರುವ ಬೋಧಕೇತರ ನೌಕರರು ಸಹ ಸೇವಾ ಮಾಹಿತಿಯನ್ನು ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ.

ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿನ ಮುಖಪುಟದ ಬಲಗಡೆಯಲ್ಲಿ ನೀಡಿರುವ ಲಿಂಕ್‌ನ್ನು ಕ್ಲಿಕ್ ಮಾಡಿದ ನಂತರ ಕಾಣುವ ಪುಟದಲ್ಲಿ ಬೋದಕೇತರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳ ಸೇವಾ ಮಾಹಿತಿಯನ್ನು ಅಳವಡಿಸುವ ಪರದೆ ಕಾಣುತ್ತದೆ. ಬಳಕೆದಾರರ ಕೈಪಿಡಿಯನ್ನು (Non-teaching staff data software user Manual) ನೀಡಲಾಗಿದೆ ಡೌನ್ ಲೋಡ್ ಮಾಡಿಕೊಂಡು ಮುಂದಿನ ಕ್ರಮವಹಿಸುವುದು.

ಜಿಲ್ಲೆ ಹಾಗೂ ತಾಲ್ಲೂಕು ಹಂತದಲ್ಲಿ Non-teaching staff Data software ತಂತ್ರಾಂಶದಲ್ಲಿ ಸೇವಾ ಮಾಹಿತಿಯನ್ನು 30/11/2019 ರೊಳಗೆ ಇಂದೀಕರಿಸಲು (update) ತಿಳಿಸಿದೆ. ಈ ರೀತಿಯಲ್ಲಿ ಸೇವಾ ಮಾಹಿತಿಯನ್ನು ಅಳವಡಿಸಲು ಮೇಲುಸ್ತುವಾರಿ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ಆಯಾ ಜಿಲ್ಲಾ ಉಪ ನಿರ್ದೇಶಕರ ಕಛೇರಿಯ ಪತ್ರಾಂಕಿತ ಅಧಿಕಾರಿಯನ್ನು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯ ವ್ಯವಸ್ಥಾಪಕರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಆದ್ದರಿಂದ ನಿಗದಿತ ಅವಧಿಯಲ್ಲಿ ನಿಮ್ಮ ಜಿಲ್ಲೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ಬೋದಕೇತರ ಸಿಬ್ಬಂದಿ

ಮತ್ತು ಅಧಿಕಾರಿಗಳ ಸೇವಾ ಮಾಹಿತಿಗಳನ್ನು ತಪ್ಪದೇ Non–teaching staff Data software ತಂತ್ರಾಂಶದಲ್ಲಿ ಅಳವಡಿಸಲು/ ಪರಿಶೀಲಿಸಲು ಕ್ರಮವಹಿಸಲು ಸೂಚಿಸಲಾಗಿದೆ. ಈ ಬಗ್ಗೆ ಯಾವುದೇ ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಇ–ಮೇಲ್ ವಿಳಾಸ tdsegov@gmail.com ಗೆ ಮೇಲ್ ಮಾಡಿ ಮಾಹಿತಿ ಪಡೆಯವುದು.

ಜಂಟಿ ನಿರ್ದೇಶಕರು (ಆಡಳಿತ)
ಆಯುಕ್ತರ ಕಛೇರಿ, ಬೆಂಗಳೂರು

ಪ್ರತಿಯನ್ನು

1. ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,
2. ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,
3. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ, (ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋದಕೇತರ ಸಿಬ್ಬಂದಿಗಳ ಸೇವಾ ಮಾಹಿತಿಯನ್ನು ಅಳವಡಿಸಲು ಕ್ರಮವಹಿಸುವುದು)
4. ಕಛೇರಿ ಪ್ರತಿ